ಓ.ಎಸ್. ನಂ. 75/2015

ಪಿ.ಡಬ್ಲ್ಯು: 01 (ಓಬಯ್ಯ)

ದಿನಾಂಕ: 21.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ನನ್ನ ತಂದೆಯ ಹೆಸರು ಮಳೇಲ ಗಿಡ್ಡಯ್ಯ ಅಲಿಯಾಸ್ ಮಳೇಲ ಲಿಂಗಯ್ಯ ಎಂದರೆ ಬರಿ ಮಳೇಲ ಗಿಡ್ಡಯ್ಯ, ಲಿಂಗಯ್ಯ ಎಂಬುದು ಅವರ ಹೆಸರಲ್ಲ. ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು, ಹೆಣ್ಣು ಮಕ್ಕಳು ಇರುವುದಿಲ್ಲ. ಗೌಡರ ಲಿಂಗಯ್ಯ ನನ್ನ ದೊಡ್ಡಪ್ಪನ ಮಗ. ನನ್ನ ದೊಡ್ಡಪ್ಪನ ಹೆಸರು ಗೌಡರ ಬೊಮ್ಮಯ್ಯ.

ನನ್ನ ಪ್ರಕಾರ ನನ್ನ ತಂದೆಗೆ 3 ಜನ ಒಡಹುಟ್ಟಿದವರು. ಅವರುಗಳು ಗೌಡರ ಲಿಂಗಯ್ಯ, ಮಳೇಲ ಓಬಯ್ಯ, ಕಜ್ಜಿ ಪಾಲಯ್ಯ.

ಗೌಡರ ಲಿಂಗಯ್ಯನಿಗೆ ಮಳೇಲ ಲಿಂಗಯ್ಯ, ಹನುಮಂತಯ್ಯ, ಬೊಮ್ಮಯ್ಯ ಮತ್ತು ಅವ್ಲ ಲಿಂಗಯ್ಯ ಎಂಬ ಮಕ್ಕಳು ಇರುತ್ತಾರೆ. ಗೌಡರ ಲಿಂಗಯ್ಯನಿಗೆ ಹೆಣ್ಣು ಮಕ್ಕಳು ಇರುವುದಿಲ್ಲ.

ಅವ್ಲ ಲಿಂಗಯ್ಯ 3 ಜನ ಗಂಡು ಮಕ್ಕಳು. ಅವರುಗಳು ಷಣ್ಮುಖಪ್ಪ, ಹನುಮಣ್ಣ, ಓಬಣ್ಣ ಮತ್ತು ಕಜ್ಜಿ ಪಾಲಯ್ಯ.

ಕಜ್ಜಿ ಪಾಲಯ್ಯನಿಗೆ ಹನುಮಯ್ಯ ಮತ್ತು ಕಜ್ಜಿ ಪಾಲಯ್ಯ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ಹನುಮಯ್ಯ ಈಗ ಮೃತಪಟ್ಟಿದ್ದು, ಆತನ ಮಗ 12 ನೇ ಪ್ರತಿವಾದಿಯಾಗಿರುತ್ತಾನೆ.

ನನ್ನ ಅಣ್ಣ ಹನುಮಯ್ಯ ಈಗ ಮೃತಪಟ್ಟಿದ್ದು, ಅವರ ಹೆಂಡತಿ ಬೋರಮ್ಮ ಈಗ ಜೀವಂತ ಇದ್ದಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.